ಅ) ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1973ರ ಅಧಿನಿಯಮ 8 (6) ರ ಪ್ರಕಾರ ಸ್ವಂತ ಉಪಯೋಗಕ್ಕಾಗಿ ಹಿಡುವಳಿದಾರರು ತಮ್ಮ ಜಮೀನಿನಲ್ಲಿ ವರ್ಷಕ್ಕೆ 2.80 ಘ.ಮಿ. ನಾಟಾ ಮತ್ತು 5 ಟನ್ ಸೌದೆ ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ ಪಡೆಯ ಬಹುದಾಗಿದೆ. ಹಿಡುವಳಿದಾರರು ನಮೂನೆ 1ರಲ್ಲಿ ವೃಕ್ಷಾಧಿಕಾರಿಗೆ ಅರ್ಜಿ ನೀಡಬೇಕು. ಅರ್ಜಿಯೊಂದಿಗೆ ಸದರಿ ಹಿಡುವಳಿದಾರರಿಗೆ ಜಮೀನು ಹಾಗೂ ಮರಗಳ ಮೇಲೆ ಹಕ್ಕಿದೆಯೇ ಎಂಬ ಬಗ್ಗೆ ಜಿಲ್ಲಾಧಿಕಾರಿಗಳಿಂದ ಅಭಿಪ್ರಾಯ ಪತ್ರ ಹಾಗೂ ಕಡಿಯಲಿಚ್ಛಿಸುವ ಮರಗಳು ಆತನ ಜಮೀನು ಹದ್ದುಬಸ್ತಿನೊಳಗೆ ಬರುತ್ತಿದೆಯೇ ಎಂಬ ಬಗ್ಗೆ ಭೂಮಾಪನ ಸಹಾಯಕರಿಂದ ದೃಢೀಕೃತ ನಕ್ಷೆ ಸಲ್ಲಿಸಬೇಕು.

ಆ) ಹೌದು. ದಿನಾಂಕ 2-11-1998 ರಂದು

ಅರಣ್ಯದಲ್ಲಿ ಅಕ್ರಮವಾಗಿ ಮರ ಕಡಿದವರ ವಿರುದ್ಧ ಕ್ರಮ.

2847:(3896)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರ ಪೇಟೆ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನ ಕುಮಾರಹಳ್ಳಿ ಅರಣ್ಯದಲ್ಲಿ ಅಕ್ರಮ ಮರ ಕಡಿದು ಮಾರಿದವರ ಮೇಲೆ ಹಾಗೂ ಅಧಿಕಾರ ವರ್ಗದವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಮಡಿಕೇರಿ ವಿಭಾಗದ ಸೋಮವಾರಪೇಟೆ ವಲಯ ವ್ಯಾಪ್ತಿಯ ಕುಮಾರಹಳ್ಳಿ ಗ್ರಾಮದ ರೆಡೀಂ ಜಾಗ ಸರ್ವೆ ನಂ. 1:348ಎ ಯ ಭೂಮಾಲೀಕರಾದ ಶ್ರೀ ಹೆಚ್.ಸಿ.ಬಾಬುರಾಜೇಂದ್ರ ರವರು ಕುಮಾರಹಳ್ಳಿ ಗ್ರಾಮದ ಪೈಸಾರಿ ಜಾಗ ಸರ್ವೆ ನಂ. 1:9 ರಲ್ಲಿ ಸ್ಥಳ ಅದಲು ಬದಲು ಮಾಡಿ ಸಂಬಂಧಿತ ಇಲಾಖಾ ಸಹಾಯಸ್ತ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮರಗಳನ್ನು ಕಡಿದು ಸಾಗಿಸಿ ಸರ್ಕಾರಕ್ಕೆ ವಂಚನೆ ಎಸಗಿದ ಈ ಕೃತ್ಯಕ್ಕಾಗಿ ಇಲಾಖಾ ವತಿಯಿಂದ ಸರ್ಕಾರಕ್ಕಾದ ನಷ್ಟವನ್ನು ತುಂಬಲು ನೋಟೀಸನ್ನು ನೀಡಿ, ನಿಯಮದ ಪ್ರಕಾರ ನ್ಯಾಯಾಲಯದಲ್ಲಿ ದಾವೆಯನ್ನು ಹೊಡಲಾಗಿದೆ.

ಅರಣ್ಯ, ಕಂದಾಯ ಮತ್ತು ಸರ್ವೆ ಇಲಾಖೆಯ ಅಧಿಕಾರಿಗಳು ಈ ಪ್ರಕರಣದಲ್ಲಿ ಶಾಮಿಲಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸಿಬ್ಬಂದಿ ಮತ್ತು

ಅಡಳಿತ ಸುಧಾರಣಾ ಇಲಾಖೆಯನ್ನು ಜಂಟಿಯಾಗಿ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

ರಾಜ್ಯದಲ್ಲಿರುವ ರಸ್ತೆ ಹಾಗೂ ಸೇತುವೆ ಅಭಿವೃದಿಗೆ ನಬಾರ್ಡ್‌ನಿಂದ ಪಡೆದ ಮೊತ್ತ.

2848: (3921)

ಶ್ರೀ ಎಸ್.ಅಂಗಾರ (ಸುಳ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98 ಹಾಗೂ 98-99 ನೇ ಸಾಲಿಗೆ ರಾಜ್ಯದಲ್ಲಿರುವ ರಸ್ತೆ ಹಾಗೂ ಸೇತುವೆ ಅಭಿವೃದ್ಧಿಗೆ ನಬಾರ್ಡ್‌ನಿಂದ ಪಡೆಯಲಾದ ಹಣದ ಮೊತ್ತವೆಷ್ಟು?

ಆ) ಈ ಹಣವನ್ನು ಸಹಾಯ ಧನವಾನ್ನಾಗಿ ಪಡೆಯಲಾಗಿದೆಯೋ ಅಥವಾ ಸಾಲವಾಗಿ ಪಡೆಯ ಲಾಗಿದೆಯೇ?

ಇ) ಈ ಹಣವನ್ನು ಒಟ್ಟು ಎಷ್ಟು ವಿಧಾಸಭಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿದೆ: ಯಾವ ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆ?

ಈ) ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಎಷ್ಟು ವಿಧಾನಸಭಾ ಕ್ಷೇತ್ರಗಳಿಗೆ ಈ ಹಣವನ್ನು ಮಂಜೂರು ಮಾಡಲಾಗಿದೆ. ಎಷ್ಟು ಹಣವನ್ನು ಇದುವರೆಗೂ ಬಿಡುಗಡೆ ಮಾಡಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ 1997-98ನೇ ಸಾಲಿನಲ್ಲಿ 138.82 ಕೋಟಿ ಹಾಗೂ 98-99ರಲ್ಲಿ ಈವರೆಗೆ 14.65 ಕೋಟಿ ರೂ.ಗಳ ಸಾಲ ಮಂಜೂರಾಗಿದೆ.

ಆ) ಈ ಹಣವನ್ನು ಸಾಲವಾಗಿ ಪಡೆಯಲಾಗಿದೆ.

ಇ) ನಬಾರ್ಡ್‌ನವರು ಮುಂಗಡ ಸಾಲ ನೀಡುವುದಿಲ್ಲ. ರಾಜ್ಯ ಸರ್ಕಾರ ಆಯ್ಕೆ ಮಾಡಿದ ಕಾಮಗಾರಿಗಳಿಗೆ ಮಂಜೂರಾತಿ ನೀಡುತ್ತಿದ್ದು ಮೊದಲಿಗೆ ರಾಜ್ಯ ಸರ್ಕಾರದ ಬೊಕ್ಕಸದಿಂದ ವೆಚ್ಚ ಮಾಡಿ ನಂತರ ನಬಾರ್ಡ್‌ನಿಂದ ಶೇ:90 ಮೊತ್ತಕ್ಕೆ ಮರು ಪಾವತಿ ಪಡೆಯ ಬೇಕಿರುತ್ತದೆ. ಹೀಗೆ ಮಂಜೂರಾದ ಕಾಮಗಾರಿಗಳು 192 ಕ್ಷೇತ್ರಗಳಲ್ಲಿ